**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ.59/2017                ದಿನಾಂಕ:3-9-2024**

**ಡಿ.ಡಬ್ಲ್ಯೂ:1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**
**ಮಂದುವರೆದ ಪಾಟೀ ಸವಾಲು : ವಾದಿಯ ಪರ ಶ್ರೀಮತಿ ಎಲ್ ಎಂ ಹೆಚ್ ವಕೀಲರಿಂದ**

1. ನಿಡಿ-1 ರ ಕ್ರಯಪತ್ರದ ಪ್ರಕಾರ ನಾಗರತ್ನಮ್ಮ ರವರು ಮಲ್ಲಿಕಾರ್ಜುನ ರವರಿಂದ ನಿವೇಶನವನ್ನು ಮಾತ್ರ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಮಾಡಿದ ನಂತರ ಮನೆಯನ್ನು ನನ್ನ ಅತ್ತೆ ನಿರ್ಮಾಣ ಮಾಡಿರುತ್ತಾರೆ. ನನ್ನ ಅತ್ತೆ ಎಷ್ಟು ವರ್ಷಗಳ ಚಿಲ್ಲರೆ ವ್ಯಾಪಾರ ಮಾಡಿಕೊಂಡಿದ್ದರು ಎಂದುನನಗೆ ಗೊತ್ತಿಲ್ಲ. ನಾನು ನನ್ನ ಗಂಡನ ಮನೆಗೆ ಹೋದಾಗ ನನ್ನ ಅತ್ತೆ ಸದರಿ ಚಿಲ್ಲರೆ ವ್ಯಾಪಾರ ಮಾಡುತ್ತಿರಲಿಲ್ಲ. ನನ್ನ ಅತ್ತೆಗೆ ಚಿಲ್ಲರೆ ವ್ಯವಹಾರದಿಂದ ಯಾವುದೇ ಆದಾಯ ಬರುತ್ತಿರಲಿಲ್ಲ ಮತ್ತು ಅವರು ನಿವೇಶನವನ್ನು ಖರೀದಿ ಮಾಡುವಷ್ಟು ಆರ್ಥಿಕವಾಗಿ ಸದೃಢರಾಗಿರಲಿಲ್ಲ, ಆದ ಕಾರಣ ಅವರ ಹೆಸರಿನಲ್ಲಿ ನನ್ನ ಮಾವ ಸದರಿ ನಿವೇಶನವನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾಗರತ್ನಮ್ಮ ಮತ್ತು ಅವರ ಗಂಡ ಅನುಭವಿಸುತ್ತಿದ್ದು ಅವರ ಮರಣಾನಂತರ ಅವರ ಮಕ್ಕಳು ಅನುಭೋಗದಲ್ಲಿ ಮುಂದುವರೆದುಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾಗರತ್ನಮ್ಮರವರ ಗಂಡ ನಾಗರತ್ನಮ್ಮನ ಹೆಸರಿನಲ್ಲಿ ಖರೀದಿ ಮಾಡಿದ ಕಾರಣ ಅದು ಒಟ್ಟು ಕುಟುಂಬದ ಆಸ್ತಿಯಾಗಿದ್ದು ನಾಗರತ್ನಮ್ಮರವರಿಗೆ ಯಾವುದೇ ಸಂಪೂರ್ಣ ಅಧಿಕಾರ ಇಲಿಲ್ಲ ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಷಯ ತಿಳಿದಿದ್ದರೂ ಸಹ ನಿಡಿ-1 ರಂತೆ ಮರಣ ಶಾಸನವನ್ನು ಸೃಷ್ಠಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**